ಕನಿಷ್ಠ 50 ಮಕ್ಕಳ ದಾಖಲಾಗುವಂತಿರಬೇಕು

2ರಿಂದ 5 ಎಕರೆ ನಿವೇಶನ ದೊರಕುವಂತಿರಬೇಕು [ನಗರ ಪ್ರದೇಶಗಳನ್ನು ಹೊರತುಪಡಿಸಿ]

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)151(344)

ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿರುವ ಕುಡಿಯುವ ನೀರಿನ ಕೊಳವೆ ಬಾವಿಗಳೆಷ್ಟು,

ಆ) ಎಷ್ಟು ಕೊಳವೆ ಬಾವಿಗಳು ದುರಸ್ಥಿಗೊಳಗಾಗಿವೆ,

ಇ) ರಾಜ್ಯದಲ್ಲಿ ಕುಡಿಯುವ ನೀರಿನ ಹಾಹಾಕಾರ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಬಂದಿದ್ದಲ್ಲಿ, ಕುಡಿಯುವ ನೀರಿನ ಹಾಹಾಕಾರ ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್ ಎ ರವೀಂದ್ರನಾಥ್

ಅ) ಮಾರ್ಚ್ 2007ರ ಅಂತ್ಯಕ್ಕೆ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಕುಡಿಯುವ ನೀರಿನ ವ್ಯವಸ್ಥೆಗಾಗಿ ವಿವಿಧ ಕುಡಿಯುವ ನೀರಿನ ಯೋಜನೆಗಳ ಸಲುವಾಗಿ ಸುಮಾರು 2 42 ಲಕ್ಷ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ

ಆ) ಈ ಪೈಕಿ ಸುಮಾರು 54,426 ಕೊಳವೆ ಬಾವಿಗಳು ದುರಸ್ತಿಗೊಳಗಾಗಿವೆ

ಇ) ಹಲವು ಗ್ರಾಮಗಳಲ್ಲಿ ನೀರು ಪೂರೈಕೆ ಪ್ರಮಾಣ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಈ) 40 LPCDಗಿಂತ ಕಡಿಮೆ ನೀರು ಪೂರೈಕೆಯಾಗುತ್ತಿರುವ ಗ್ರಾಮಗಳಲ್ಲಿ ನೀರು ಸರಬರಾಜು ಪ್ರಮಾಣ ಉತ್ತಮಪಡಿಸಲು ಅಗತ್ಯ ಕ್ರಿಯಾ ಯೋಜನೆಗಳನ್ನು ರೂಪಿಸಲು ಜಿಲ್ಲಾ ಪಂಚಾಯತ್‌ಗಳಿಗೆ ಈಗಾಗಲೇ ಸೂಚಿಸಲಾಗಿದೆ ತುರ್ತು ಸಂದರ್ಭಗಳಲ್ಲಿ ಸ್ಥಳೀಯ ಅವಶ್ಯಕತೆಯನುಸಾರ ಆದ್ಯತೆ ಮೇಲೆ ಪರಿಹಾರ ಒದಗಿಸಲು ತಾಲ್ಲೂಕುವಾರು ನಿಯಂತ್ರಣಾ ಕೊರಡಿಗಳನ್ನು ತೆರೆಯಲಾಗಿದೆ ಜೊತೆಗೆ ಶಾಸಕರ ಅಧ್ಯಕ್ಷತೆಯಲ್ಲಿರುವ ಟಾಸ್ಕ್‌ಫೋರ್ಸ್ ಸಮಿತಿಗಳು ಸಹ ತುರ್ತು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸ್ಪಂದಿಸುತ್ತಿವೆ

ಕರ್ನಾಟಕ ವಿಧಾನ ಸಭೆ

ಹನ್ನೆರಡನೇ ವಿಧಾನ ಸಭೆ
ಐದನೇ ಅಧಿವೇಶನದ ಮುಂದುವರೆದ ಉಪವೇಶನ
ಗುರುವಾರ 12 ನೇ ಜುಲೈ 2007 ರಂದು ಸದನವು ವಿಧಾನ
ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11
ಗಂಟೆ 10 ನಿಮಿಷಗಳಿಗೆ ಸಮಾವೇಶಗೊಂಡಿತ್ತು

ಅಧ್ಯಕ್ಷರಾದ ಶ್ರೀ ಕೃಷ್ಣ ರವರು ಅಧ್ಯಕ್ಷಪೀಠವನ್ನು
ಅಲಂಕರಿಸಿದ್ದರು

ಅಧ್ಯಕ್ಷರು ನೆ ಲ ನರೇಂದ್ರಬಾಬು

(ಮಾನ್ಯ ಸದಸ್ಯರಾದ ನೆ ಲ ನರೇಂದ್ರಬಾಬುರವರು ಸದನಕ್ಕೆ ಗೈರು ಹಾಜರಾಗಿದ್ದರು)

ಅಧ್ಯಕ್ಷರು ಜೆ ನರಸಿಂಹ ಸ್ವಾಮಿಯವರೆ, ಪ್ರಶ್ನೆ ಕೇಳಿ

ಗ್ರಾಮೀಣ ಪ್ರದೇಶದಲ್ಲಿ ವೈಧ್ಯಾಧಿಕಾರಿಗಳು

47 (236) ಶ್ರೀ ನರಸಿಂಹ ಜೆ (ದೊಡ್ಡಬಳ್ಳಾಪುರ)

ಮಾನ್ಯ ಆರೋಗ್ಯ ಮತ್ತು ಕುಂಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಗ್ರಾಮಾಂತರ ಪ್ರದೇಶಗಳ ಪ್ರಾಧಮಿಕ ಆರೋಗ್ಯ ಕೇಂದ್ರಗಳಿಗರೆ ನೇಮಕಗೊಂಡಿರುವ ವೈಧ್ಯಾದಿಕಾರಿಗಳು ಸರಿಯಾಗಿ ಕರ್ತವ್ಯಕ್ಕೆ ಹಾಜರಾಗದೇ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ವಸತಿ ಸಮಸ್ಯೆ ಇರುವುದರಿಂದ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗುತ್ತಿಲ್ಲವೆಂದು ವೈದ್ಯರು ತಿಳಿಸುತ್ತಿದ್ದು ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಇ) ತಾಲ್ಲೂಕುಗಳಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರನ್ನು ಅಂತ ತಾಲ್ಲೂಕಿಗೆ ನಿಯೋಜನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ವೈಧ್ಯಾಧಿಕಾರಿಯಾಗಿ ನಿಯೋಜಿಸಿದ ಸ್ಥಳಕ್ಕೆ ಹೋಗದೆ ಹಾಗೂ ಈ ಹುದ್ದೆಯನ್ನು ಬೇರೆ ವೈಧ್ಯಾದಿಕಾರಿಗಳಿಂದ ತುಂಬಲು ಆಗದೆ ಉಂಟಾಗಿರುವ ತಾಂತ್ರಿಕ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಆರ್ ಅಶೋಕ್

ಅ) ಬಂದಿದೆ

ಆ) ರಾಜ್ಯದಲ್ಲಿ 1679 ಪ್ರಾಧಮಿಕ ಆರೋಗ್ಯ ಕೇಂದ್ರಗಳಿದ್ದು 932 ಕೇಂದ್ರಗಳಲ್ಲಿ ವಸತಿ ಗೃಹಗಳು ಇರುತ್ತದೆ 747 ಕೇಂದ್ರಗಳಲ್ಲಿ ವಸತಿ